72

# ಗೆದ್ದವನಾದರೂ ... ಜಯವೀರನೇ!

## ಓದುವ ಮನೆಪಾಠ #30

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).

E. ಮಂಗಳವಾರ: “ಪ್ರಶ್ನೆಗಳ ಮಹಾದಿನ” (ಮುಂದುವರೆಯುವದು).

3. ಪ್ರಶ್ನೆಗಳ ಸರಣಿ (ಮುಂದುವರೆಯುವದು):

b. ಪುನರುತ್ಥಾನ ಕುರಿತ ಸದ್ದುಕಾಯರ ಪ್ರಶ್ನೆ (ಮತ್ತಾಯ 22:23-33; ಮಾರ್ಕ 12:18-27; ಲೂಕ 20:27-39).

c. ದೊಡ್ಡ ಆಜ್ಞೆಯ ಬಗ್ಗೆ ವಕೀಲನು ಕೇಳಿದ ಪ್ರಶ್ನೆ (ಮತ್ತಾಯ 22:34-40; ಮಾರ್ಕ 12:28-34; ಲೂಕ 20:40).

d. ಕ್ರಿಸ್ತನು: ಯಾರು ಎಂಬ ಯೇಸುವಿನ ಪ್ರಶ್ನೆ (ಮತ್ತಾಯ 22:41-46; ಮಾರ್ಕ 12:35-37; ಲೂಕ 20:41-44).[1]

4. ಸದ್ದುಕಾಯರು ಹಾಗೂ ಫರಿಸಾಯರು ಕ್ರಿಸ್ತನನ್ನು ಅಲ್ಲಗಳೆದರು (ಮತ್ತಾಯ 23:1-39; ಮಾರ್ಕ 12:38-40; ಲೂಕ 20:45-47).[2]

## ಪರಿಚಯ

ನೀವು ಈಗ ಕೊಲೆಗಾರರ ನಡುವೆ ಇರುವಿರಿ ಅವರಲ್ಲಿ ಒಬ್ಬನು ಕೆಟ್ಟ ನಗುವಿನೊಂದಿಗೆ ನಿಮ್ಮ ಕಡೆಗೆ ಬರುತ್ತಿದ್ದಾನೆ. ಈ ನೀವು ನಿಮ್ಮ ಜೀವಕ್ಕಾಗಿ ಹೋರಾಡಬೇಕಿದೆ, ನೀವು ಅವನನ್ನು ಸೋಲಿಸುವಿರಿ, ನೀವು ವಿರಾಮ ಪಡೆಯುವಷ್ಟರಲ್ಲಿ ಮತ್ತೊಬ್ಬನು ನಿಮ್ಮ ಸ್ಥಳದಲ್ಲಿ ಹಾಜರಿರುತ್ತಾನೆ. ಈ ರೀತಿಯಾದ ಸಂಗತಿಯು ಪುನರಾವರ್ತನೆಯಾಗುತ್ತಲೇ ಇರುತ್ತದೆ, ಇಂಥಹ ವೇದನೆಗೆ ಒಂದು ಅಂತ್ಯವಿಲ್ಲವೇ? ಯೇಸುವಿನ ಕಡೇವಾರದ ಮಂಗಳವಾರ ಇಂಥಹದೇ ವಿಧವಾದ ಘಟನೆಯು ನಡೆಯುತ್ತಿದೆ ಅಲ್ಲಿ ಆತನ ವೈರಿಗಳು ಯೇಸುವನ್ನು ಸುತ್ತುವರೆದಿದ್ದಾರೆ, ಆತನು ಆಗಾಗ್ಗೆ ಅವಮಾನಕ್ಕೆ ಒಳಗಾಗುತ್ತಿದ್ದಾನೆ. ಆತನು ಒಂದು ಗುಂಪನ್ನು ಎದುರಿಸಿದ ತಕ್ಷಣ ಮತ್ತೊಂದು ಗುಂಪು ಆತನಿಗೆ ಎದುರಾಗುತ್ತಿದೆ. ಅವರು ಆತನನ್ನು ಕೈಗಳಿಂದ ಹೊಡೆಯದೆ, ಚುಚ್ಚುಮಾತುಗಳಿಂದ ಹೀಯಾಳಿಸುತ್ತಿದ್ದಾರೆ.

ಹಿಂದಿನ ಪಾಠದಲ್ಲಿ, ಕರ್ತನ ಅಧಿಕಾರಕ್ಕೆ ಜನರು ಹಾಕಿ ಸವಾಲಿನ ಕುರಿತು ನೋಡಿದ್ದೇವೆ. ಆತನು ಸುಂಕ ನೀಡುವ ಬಗ್ಗೆ ನೀಡಿದ ಉತ್ತರವನ್ನು ನಾವು ಗಮನಿಸಿದ್ದೇವೆ. ಅವರೆಲ್ಲರೂ ಉತ್ತರ ನೀಡಲಾಗದಂತ ಪ್ರಶ್ನೆಗಳನ್ನು ಯೇಸು ಕೇಳುವವರಿಗೆ ಪ್ರಶ್ನಿಸಿದರು. ಆತನನ್ನು ಅವರು ನಿಂದಾಪಮಾನ ಮಾಡಿದರು. ಎದುರಾಳಿಯನ್ನು ಸೋಲಿ ಸಿದವನ ಕೈಯನ್ನು ಮೇಲಕ್ಕೆತ್ತಿ ಈತನು ಗೆದ್ದವನು ಎಂದು ಹೇಳಿದ್ದಾಗ್ಯೂ - ಆತನು ಜಯವೀರನೇ! ಯೇಸು ತನ್ನ ವೈರಿಗಳೊಡನೆ ಮಾಡಿದ ಮಾತಿನ ಯುದ್ಧದಲ್ಲಿ ಗೆದ್ದವನೂ ... ಜಯವೀರನೂ ಆದನು!

## ಪುನರುತ್ಥಾನದ ಕುರಿತ ಚರ್ಚೆ
## (ಮತ್ತಾಯ 22:23-33; ಮಾರ್ಕ 12:18-27; ಲೂಕ 20:27-39)

**ಒಂದು ಪ್ರಶ್ನೆ**

ಫರಿಸಾಯರ ಹಾಗೂ ಹೆರೋದ್ಯರ ಪ್ರಶ್ನೆಗಳಿಗೆ ಯೇಸು ಉತ್ತರಿಸಿದ ನಂತರ (ಮತ್ತಾಯ 22:15-22) ಕೆಲವು ಸದ್ದುಕಾಯರು ಯೇಸುವಿನ ಬಳಿಗೆ ಬಂದರು (ಮಾರ್ಕ 12:15-22).[3] ಇವರು ಪುನರುತ್ಥಾನವಿಲ್ಲ ಎಂದು ಹೇಳುತ್ತಿದ್ದರು (ಮಾರ್ಕ 12:18ಎ). ಆತ್ಮೀಕ ಪ್ರಪಂಚಕ್ಕೆ ಸಂಬಂಧಪಟ್ಟವುಗಳನ್ನು ದೇವದೂತರ ಕುರಿತಾದ ಸಂಗತಿಗಳನ್ನು ಅವರು ಒಪ್ಪುತ್ತಿರಲಿಲ್ಲ (ಅಪೊಸ್ತಲರ ಕೃತ್ಯಗಳು 23:8). ಇವರು ಯೇಸುವಿನ ಬಳಿ ಬಂದು “ಆತನನ್ನು ಪ್ರಶ್ನಿಸಿದರು” (ಮಾರ್ಕ 12:18ಬಿ).

ಫರಿಸಾಯರನ್ನು ಯೇಸು ಅವಮಾನಪಡಿಸಿದ್ದರಿಂದ, ಸದ್ದುಕಾಯರು ಸಂತಸಗೊಂಡರು. ಹೇಗೂ ಇವರ ಪ್ರಶ್ನೆಗಳಿಗೆ ಯೇಸು ಉತ್ತರಿಸಲಾರನು ಎಂದು ಅವರು ತಿಳಿದರು. ಪುನರುತ್ಥಾನದ ಕುರಿತು ಫರಿಸಾಯರೊಂದಿಗೆ ಇವರು ಭಿನ್ನಾಭಿಪ್ರಾಯ ಹೊಂದಿದ್ದರಿಂದ, ಈ ಅವಕಾಶವನ್ನು ಸದುಪಯೋಗ ಮಾಡಿಕೊಂಡರು.[4] ಅವರು ಪೂರ್ವಕಲ್ಪಿತವಾದ ಪ್ರಶ್ನೆಯನ್ನು ಕೇಳಿದರು:

> ಬೋಧಕನೇ, ಅಣ್ಣನಾದವನು ಮಕ್ಕಳಿಲ್ಲದೆ ಹೆಂಡತಿಯನ್ನು ಬಿಟ್ಟು ಸತ್ತರೆ ಆಕೆಯನ್ನು ಅವನ ತಮ್ಮನು ಮದುವೆ ಮಾಡಿಕೊಂಡು ತನ್ನ ಅಣ್ಣನಿಗೆ ಸಂತಾನವನ್ನು ಪಡೆಯಬೇಕೆಂದು ಮೋಶೆಯು ನಮಗೆ ಬರೆದಿಟ್ಟನಷ್ಟೆ. ಏಳು ಮಂದಿ ಅಣ್ಣ ತಮ್ಮಂದಿರಿದ್ದರು. ಮೊದಲನೆಯವನು ಹೆಂಡತಿಯನ್ನು ಮಾಡಿಕೊಂಡು ಸಂತಾನವಿಲ್ಲದೆ ಸತ್ತನು. ಎರಡನೆಯವನೂ ಆಕೆಯನ್ನು ಮದುವೆಮಾಡಿಕೊಂಡು ಸಂತಾನವಿಲ್ಲದೆ ಸತ್ತನು. ಆದರಂತೆ ಮೂರನೆಯವನು. ಇದೇ ಪ್ರಕಾರ ಏಳು ಮಂದಿಯೂ ಸಂತಾನವಿಲ್ಲದೆ ಹೋದರು. ಕಡೆಯಲ್ಲಿ ಆ ಸ್ತ್ರೀಯೂ ಸತ್ತಳು. ಪುನರುತ್ಥಾನದಲ್ಲಿ ಆಕೆ ಯಾರ ಹೆಂಡತಿಯಾಗಿರುವಳು? ಆಕೆಯನ್ನು ಏಳು ಮಂದಿಯೂ ಮದುವೆಮಾಡಿಕೊಂಡಿದ್ದರಲ್ಲಾ ಅಂದರು (ಮಾರ್ಕ 12:19-23).

ಇವರು ನೀಡಿದ ಈ ನಿದರ್ಶನವನ್ನು ಹಾಗೂ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಅದರ ಹಿನ್ನಲೆಯಲ್ಲಿರುವ ನಿಯಮಗಳನ್ನು ಅರಿಯಬೇಕಾಗುತ್ತದೆ (ಲೇವಿಯರ ಶಾಸ್ತ್ರ ಅಥವಾ ನಿಯಮ) ಇದನ್ನು ಧರ್ಮೋಪದೇಶಕಾಂಡ 25:5-10[5]ರಲ್ಲಿ, ಗಮನಿಸುತ್ತೇವೆ. ಮದುವೆ ಯಾದ ವ್ಯಕ್ತಿ ಮಕ್ಕಳನ್ನು ನೀಡದೆ ಮರಣ ಹೊಂದಿದರೆ, ಅವನ ಸಹೋದರ (ಅಥವಾ ಹತ್ತಿರದ ಸಂಬಂಧಿ) ಅವನ ವಿಧವೆಯನ್ನು ಮದುವೆಯಾಗಿ ಸಂತಾನವನ್ನು ನೀಡಬೇಕಿತ್ತು. ಆ ವಿಧವೆಗೆ ಮಗುವಾದರೆ, ಸತ್ತಂತ ತನ್ನ ಸಹೋದರನಿಗೆ ಆ ಮಗುವು ಹಕ್ಕುದಾರನಾಗುತ್ತಿತ್ತು. ಒಂದು ಕುಟುಂಬವು ಸಂಪಾದಿಸಿದ ಆಸ್ತಿ ಹಾಗೂ ಸ್ವಾಸ್ತವು ಅವರಲ್ಲಿಯೇ ಉಳಿಯಬೇಕೆಂದರೆ, ಈ ನಿಯಮವನ್ನು ಅವರು ಪಾಲಿಸಬೇಕಿತ್ತು.

ಕ್ರಿಸ್ತನ ಕಾಲದಲ್ಲಿ ಈ ನಿಯಮವು ಗಂಭೀರ ಸ್ಥಾನಪಡೆದಿರುವ ಮಾಹಿತಿಯು ಇರುವದಿಲ್ಲ.[6] ಆದರೆ ಅದು ಮೋಶೆಯ ಧರ್ಮಶಾಸ್ತ್ರದ ಒಂದು ಭಾಗವಾಗಿತ್ತು. ಸದ್ದುಕಾಯರ ಈ ಪ್ರಶ್ನೆ ಗೊಂದಲಮಯವಾಗಿದ್ದರೂ, ಪರಿಹಾರ ಮಾಡಲು ಅಸಾಧ್ಯವಾದದ್ದಾಗಿರಲಿಲ್ಲ. ಅವಳು ಯಾರ ಹೆಂಡತಿಯಾಗಿರುವಳು? ಎಂಬ ಪ್ರಶ್ನೆಯಲ್ಲಿ ಸಂದೇಹವಿತ್ತು. ಪುನರುತ್ಥಾನವಿದ್ದರೆ, ಈ ಮದುವೆಯ ಸಂಬಂಧವನ್ನು ವಿವರಿಸುವದು ಕಷ್ಟಕರವಾಗಿತ್ತು.

**ಉತ್ತರ**

ಸದ್ದುಕಾಯರ ಈ ಪ್ರಶ್ನೆಯನ್ನು ಆಲಿಸಿದ ಫರಿಸಾಯರು ಇಕ್ಕಟ್ಟಿಕ್ಕೊಳಗಾದರೂ, ಯೇಸು ವಿಚಲಿತನಾಗಿರಲಿಲ್ಲ. ಯೇಸು ಅವರಿಗೆ ಉತ್ತರಿಸಿ, "ನೀವು ಶಾಸ್ತ್ರವನ್ನಾದರೂ, ದೇವರ ಶಕ್ತಿಯನ್ನಾದರೂ ತಿಳಿಯದೆ ತಪ್ಪುವವರಾಗಿದ್ದೀರಿ" (ಮತ್ತಾಯ 22:29). ಸದ್ದುಕಾಯರು ದೇವರ ಮತ್ತು ಆತನ ವಾಕ್ಯದ ವಿರುದ್ಧವಾದ ಪ್ರಶ್ನೆಯನ್ನು ಹೊಂದಿದ್ದರು. "ನೀವು ಈ ಎರಡನ್ನೂ ಅರಿಯದವರು ಎಂದು ಯೇಸು ತೋರಿಸಿಕೊಟ್ಟನು!"[7]

ಅವರು ಸುಳ್ಳಿನ ಸಂಗತಿಗಳ ಕುರಿತು ವಾದವನ್ನು ಹೊಂದಿದ್ದು, ಅವರ ದುರ್ಬದ್ಧಿಗೆ ಕುರುಹಾಯಿತು. ಸಮಾಧಿಯ ನಂತರವೂ ಜೀವವು ಮುಂದುವರೆಯುವದಾದರೆ, ಅದು ಲೌಕಿಕ ರೀತಿಯಲ್ಲೇ ಮುಂದುವರೆಯಬೇಕು ಎಂಬ ತಪ್ಪು ಭಾವನೆಯನ್ನು ಅವರು ಹೊಂದಿದ್ದರು. ಅದು ಅವರ ಭ್ರಮೆ ಎಂದು ಯೇಸು ತಿಳಿಸಿದನು:

> ಯೇಸು ಅವರಿಗೆ - ಈ ಲೋಕದ ಜನರು ಮದುವೆಮಾಡಿಕೊಳ್ಳುತ್ತಾರೆ, ಮದುವೆ ಮಾಡಿಕೊಡುತ್ತಾರೆ; ಆದರೆ ಆ ಲೋಕವನ್ನೂ ಸತ್ತವರೊಳಗಿಂದ ಪುನರುತ್ಥಾನವನ್ನೂ ಪಡೆಯುವದಕ್ಕೆ ಯೋಗ್ಯರೆನಿಸಿಕೊಂಡಿರುವವರು ಮದುವೆಮಾಡಿಕೊಳ್ಳುವದೂ ಇಲ್ಲ, ಮಾಡಿಕೊಡುವದೂ ಇಲ್ಲ. ಅವರು ಇನ್ನು ಮರಣಕ್ಕೆ ಗುರಿಯಾವುದೇ ಇಲ್ಲ. ಪುನರುತ್ಥಾನವನ್ನು ಹೊಂದಿದವರಾಗಿದ್ದು ದೇವದೂತರಿಗೆ ಸರಿಸಮಾನರೂ ದೇವರ ಮಕ್ಕಳೂ ಆಗಿದ್ದಾರೆ (ಲೂಕ 20:34-36).[8]

ಮದುವೆಯ ಬಂಧನವನ್ನು ಮರಣವು ಸಮಾಪ್ತಿಗೊಳಿಸುತ್ತದೆ (ರೋಮಾಪುರ 7:2). ನಂತರ ನಾವು ಆತ್ಮೀಕ ದೇಹವನ್ನು ಹೊಂದಿದವರಾಗಿ ಪುನರುತ್ಥಾನಗೊಳ್ಳುತ್ತೇವೆ ದೈಹೀಕ ವಲ್ಲ (1 ಕೊರಿಂಥ 15:42-44) ದೈಹೀಕ ಇಚ್ಛೆಗಳು ಭೂಮಿಗೆ ಸೀಮಿತವಾಗಿದೆ.[9]

ಅವರ ಎರಡನೇ ಭಿನ್ನಾಭಿಪ್ರಾಯದಲ್ಲಿ ಅವರ ಮೂಢತನ ಬಯಲಾಯಿತು: ಅಂದರೆ ಜನರು ನಿತ್ಯಾತ್ಮವನ್ನು ಹೊಂದಿರುವದಿಲ್ಲ ಎಂಬ ಶಂಖೆ. ಸತ್ತವನು ಇನ್ನೆಂದಿಗೂ ಇರಲಾರನು.[10] ಅವರ ಈ ಮೂಢತನವನ್ನು ಬಯಲು ಮಾಡುವ ಸಲುವಾಗಿ, ಯೇಸು,

> ಆದರೆ ಸತ್ತವರು ಬದುಕಿ ಏಳುತ್ತಾರೆಂಬ ವಿಷಯದಲ್ಲಿ ಹೇಳಬೇಕಾದರೆ - ನಾನು ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು ಎಂದು ದೇವರು ಮೋಶೆಗೆ ನುಡಿದದ್ದನ್ನು ನೀವು ಮೋಶೆಯ ಗ್ರಂಥದಲ್ಲಿ ಪೊದೆಯ ಸಂಗತಿಯಿರುವ ಅಧ್ಯಾಯದಲ್ಲಿ ಓದಲಿಲ್ಲವೋ ಆತನು ಜೀವಿತರಿಗೆ ದೇವರಾಗಿದ್ದಾನೆ (ಮಾರ್ಕ 12:26, 27ಎ).

ಇದು ವಿಮೋಚನಕಾಂಡ 3:6ರ ಹೇಳಿಕೆಯಾಗಿದೆ. (ವಿಮೋಚನಕಾಂಡ ಹಳೆಯ ಒಡಂಬಡಿಕೆಯ ಐದು ಪುಸ್ತಕಗಳಲ್ಲಿ ಒಂದಾಗಿದೆ, ಸದ್ದುಕಾಯರು, ಇದನ್ನು ಒಪ್ಪಿಕೊಂಡಿದ್ದರು.[11]) ಆ ವಾಕ್ಯಭಾಗದಲ್ಲಿ ಯೆಹೋವ ದೇವರು ಮಾತನಾಡಿ, "ನಾನು ನಿನ್ನ ತಂದೆಯ ದೇವರು, ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು: ವಿಮೋಚನಕಾಂಡ 3:6ನ್ನು ಬರೆದಾಗ ಅಬ್ರಹಾಮ, ಇಸಾಕ ಹಾಗೂ ಯಾಕೋಬರು ಸತ್ತು ನೂರಾರು ವರ್ಷಗ ಳಾಗಿದ್ದವು. ಸದ್ದುಕಾಯರ ಪ್ರಕಾರವಾಗಿ, "ಸತ್ತವನು ಶೂನ್ಯಸ್ಥಾನ ಸೇರುತ್ತಾನೆ."[12] ಅವರು ನಂಬಿಕೆಯು ಸರಿಯಾಗಿದಿದ್ದರೆ, ದೇವರು "ನಾನು *ಶೂನ್ಯದ* ದೇವರು" ಎಂದು ಹೇಳುತ್ತಿದ್ದ ನಲ್ಲವೇ.

ಜೀವದಿಂದ ಇಲ್ಲದವರ ದೇವರು ನಾನು ಎಂದು ಆತನು ಎಂದಿಗೂ ಹೇಳುವದಿಲ್ಲ. ಆತನ ವಾದವು ತರ್ಕಶಾಸ್ತ್ರದ ಒಂದು ಭಾಗವಾಗಿತ್ತು:[13]

- ಪ್ರಮುಖ ಹೇಳಿಕೆ: ದೇವರು ಜೀವಿಸುವವರ ದೇವರೆ ಹೊರತು ಸತ್ತವರ ದೇವರಲ್ಲ.
- ಅಪ್ರಮುಖ ಹೇಳಿಕೆ: "ನಾನು [ವರ್ತಮಾನ] ಅಬ್ರಹಾಮ, ಇಸಾಕ, ಮತ್ತು ಯಾಕೋಬರ ಅಂದರೆ, ಅವರು ಸತ್ತು ಅನೇಕ ವರ್ಷಗಳಾಗಿದ್ದರು" ಅವರ ದೇವರೆ.
- ಮುಕ್ತಾಯ: ಆದ್ದರಿಂದ, ಅಬ್ರಹಾಮ, ಇಸಾಕ, ಹಾಗೂ ಯಾಕೋಬರು ಸತ್ತಿದ್ದರೂ ಬದುಕುತ್ತಾದ್ದಾರೆ.

ಪುನರುತ್ಥಾನದ ಪ್ರಶ್ನೆಯನ್ನು ಯೇಸು ಪರೋಕ್ಷವಾಗಿ ಉತ್ತರಿಸಿದ್ದಾನೆ. ಪುನರುತ್ಥಾನದ ಕುರಿತ ಸದ್ದುಕಾಯರ ಮೂಲ ಪ್ರಶ್ನೆಗೆ ಆತನು ಉತ್ತರಿಸಿದ್ದನು: ಸತ್ತವರು ಬದುಕದೆ ಇರವದರಿಂದ, ಅವರು ಪುನರುತ್ಥಾನದಲ್ಲಿ ನಂಬಿಕೆ ಇಡಲಿಲ್ಲ. ಅವರ ಈ ಯೋಚನೆ ತಪ್ಪಾದದ್ದು, ಎಂದು ಯೇಸು ತಿಳಿಸಿದನು. "ನಾವು ಇರುವ *ಅಭಿಪ್ರಾಯವು* ಬಹು ತಪ್ಪಾಗಿದೆ" ಎಂದು ಹೇಳಿದನು (ಮಾರ್ಕ 12:27ಬಿ; ಒತ್ತಿ ಹೇಳಿದ್ದು ನನ್ನದು).

"ಜನರು ಅದನ್ನು ಕೇಳಿ ಆತನ ಬೋಧನೆಗೆ ಅತ್ಯಾಶ್ಚರ್ಯಪಟ್ಟರು" (ಮತ್ತಾಯ 22:33). ಈ ರೀತಿಯಾದ ಪ್ರತಿಕ್ರಿಯೆಯನ್ನು ಸದ್ದುಕಾಯರು ಪಡೆದದ್ದನ್ನು ಅವರು ಕಂಡಿರಲಿಲ್ಲ ಕೇಳುತ್ತಿದ್ದ ಇತರೆ ಶಾಸ್ತ್ರಿಗಳು "ಬೋಧಕನೇ ಚೆನ್ನಾಗಿ ಹೇಳಿದ್ದಿ" ಅಂದರು (ಲೂಕ 20:39; ಮತ್ತೆ ನೋಡಿ ಮಾರ್ಕ 12:32). ಬಹುಶಃ ಫರಿಸಾಯರು ಇದನ್ನು ದಾಖಲಿಸಿರಬಹುದು. ಸದ್ದುಕಾಯರು ಇನ್ನೆಂದಿಗೂ ಈ ವಿಧವಾದ ಪ್ರಶ್ನೆಗಳನ್ನು ಕೇಳಿರುವದಿಲ್ಲ!

## ಅನಿಯಮಿತ ಅಪ್ಪಣೆ
## (ಮತ್ತಾಯ 22:34-40; ಮಾರ್ಕ 12:28-34; ಲೂಕ 20:40)

ಸದ್ದುಕಾಯರು ಚರ್ಚೆಯಿಂದ ಹಿಂದೆ ಸರಿದರು. ಆದರೆ ಫರಿಸಾಯರು ತಮ್ಮ ಸೋಲನ್ನು ಒಪ್ಪಿಕೊಳ್ಳಲಿಲ್ಲ. "ಆತನು ಸದ್ದುಕಾಯರ ಬಾಯಿ ಕಟ್ಟಿದವನೆಂದು ಫರಿಸಾಯರು ಕೇಳಿ ಅಲ್ಲಿಗೆ ಕೂಡಿಬಂದರು" (ಮತ್ತಾಯ 22:34). "ಒಂದು ತ್ವರಿತ ಸಮ್ಮೇಳನವನ್ನು ಮಾಡಿ, ಒಬ್ಬ ಧರ್ಮೋಪದೇಶಕನನ್ನು ಆತನ ಮುಂದೆ ತಂದರು" (ಮತ್ತಾಯ 22:35).[15] ಈ ಹಿಂದೆ ಅವರು ಯೌವನಸ್ಥರನ್ನು ಕಳುಹಿಸಿದ್ದರು.[16] ಈಗ ಒಬ್ಬ ನಿಪುಣನನ್ನು ಕಳುಹಿಸಿದರು.

ಫರಿಸಾಯರು ಯೇಸುವನ್ನು ಸುತ್ತುವರೆದಿರುವಾಗ,[17] ಧರ್ಮೋಪದೇಶಕನು ಆತನನ್ನು ಪ್ರಶ್ನಿಸಿ, "ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾದದ್ದು? ಅಂದರು" (ಮತ್ತಾಯ 22:35, 36). ಯೆಹೂದ್ಯರು ಪ್ರತಿ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿದ್ದರು.[18] ರಬ್ಬಿಗಳು ಮೋಶೆಯ ಧರ್ಮಶಾಸ್ತ್ರದಲ್ಲಿದ 365 ನಕರಾತ್ಮಕವಾದ 248 ಸಕರಾತ್ಮಕವಾದ ನಿಯಮಗಳನ್ನು ಕಂಡುಹಿಡಿದಿದ್ದರು. ಒಟ್ಟು 613 ನಿಯಮಗಳಲ್ಲಿ ಕೆಲವನ್ನು ಕಠಿಣವಾದ (ಪ್ರಮುಖವಾದ) ಕೆಲವನ್ನು "ಹಗುರವಾದ" (ಅಪ್ರಮುಖ) ನಿಯಮಗಳೆಂದು ವಿಂಗಡಿಸಿದ್ದರು. ಬಾರವಾದವು ಗಳನ್ನು ಪ್ರಮುಖವೆಂದು ಚರ್ಚಿಸುತ್ತಿದ್ದರು.

ಈ ಹಿಂದೆ ಒಬ್ಬ ಬೋಧಕನು ಯೇಸುವನ್ನು ಪ್ರಶ್ನಿಸಿ,[19] ಧರ್ಮೋಪದೇಶಕಾಂಡ 6:5, ಮತ್ತು ಯಾಜಕಕಾಂಡ 19:18ಗಳನ್ನು ಒಗ್ಗೂಡಿಸಿ, ದೇವರನ್ನು ಪ್ರೀತಿಸುವದು ಹಾಗೂ ನೆರೆಯವನನ್ನು ಪ್ರೀತಿಸುವದು (ಲೂಕ 10:25-28), ಧರ್ಮಶಾಸ್ತ್ರದ ತಿರುಳು ಆಗಿರುತ್ತದೆ ಎಂದು ಹೇಳಿದ್ದಕ್ಕೆ ಯೇಸು:[20]

> ಇಸ್ರಾಯೇಲ್ ಜನವೇ ಕೇಳು, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ[21] ಪ್ರೀತಿಸಬೇಕು ಎಂಬುದೇ

> ಮೊದಲನೆಯ ಆಜ್ಞೆ:[22] ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದೇ ಎರಡನೆಯ ಆಜ್ಞೆ; ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ ಎಂದು ಉತ್ತರಕೊಟ್ಟನು (ಮಾರ್ಕ 12:29-31).

ಧರ್ಮೋಪದೇಶಕಾಂಡ 6:5ರಲ್ಲಿ ದಶಾಜ್ಞೆಗಳ ಮೊದಲ ನಾಲ್ಕರ ಸಾರಾಂಶ ಹಾಗೂ ಯಾಜಕಕಾಂಡ 19:18ರಲ್ಲಿ ದಶಾಜ್ಞೆಗಳ ಉಳಿದ ಕಡೇಯ ಆರು[23] ಆಜ್ಞೆಗಳ ಸಾರಾಂಶವಾಗಿದೆ. ಒಬ್ಬನು ಧರ್ಮೋಪದೇಶಕಾಂಡ 6:5 ಮತ್ತು ಯಾಜಕಕಾಂಡ 19:18ನ್ನು ಪಾಲಿಸಿದರೆ ದಶಾಜ್ಞೆಗಳನ್ನು ಪಾಲಿಸಿದ ಹಾಗೆ. ಮತ್ತು ಸಕಲ ಧರ್ಮಶಾಸ್ತ್ರವನ್ನು ಪಾಲಿಸಿದಂತೆ ಎಂದು ಯೆಹೂದ್ಯ ಬೋಧಕರು ನಂಬಿದ್ದರು.

ಯೇಸು ಆ ಹಿಂದೆ ನೀಡಿದ ಉತ್ತರದಿಂದ ಫರಿಸಾಯರ ಪ್ರತಿನಿಧಿಗಳು ಸಂತುಷ್ಟರಾಗಿದ್ದರು ಎಂಬುದನ್ನು ಫರಿಸಾಯರು ಅರಿಯಲಿಲ್ಲ (ಮಾರ್ಕ 12:28).[24] ಕರ್ತನು ನೀಡದ ಪ್ರತಿಕ್ರಿಯೆಯಿಂದ, ಅವನು ತನ್ನ ವಾದವನ್ನು[25] ಮುಂದಿಟ್ಟನು:

> ಆಗ ಆ ಶಾಸ್ತ್ರಿಯು - ಬೋಧಕನೇ, ಚೆನ್ನಾಗಿ ಹೇಳಿದೆ; ಒಬ್ಬನೇ ಇದ್ದಾನೆ, ಆತನ ಹೊರತು ಮತ್ತೊಬ್ಬ ದೇವರಿಲ್ಲ ಎಂದು ನೀನು ಹೇಳಿದ್ದು ಸತ್ಯ. ಆತನನ್ನು ಪೂರ್ಣ ಮನಸ್ಸಿನಿಂದಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸುವದು ಮತ್ತು ತನ್ನನ್ನು ಪ್ರೀತಿಸಿಕೊಳ್ಳುವಂತೆ ತನ್ನ ನೆರೆಯವನನ್ನು ಪ್ರೀತಿಸುವದು ಇವೆರಡೂ ಎಲ್ಲಾ ಸರ್ವಾಂಗ ಹೋಮಗಳಿಗಿಂತಲೂ ಎಲ್ಲಾ ಯಜ್ಞಗಳಿಗಿಂತಲೂ ಹೆಚ್ಚಿನವು ಅಂದನು (ಮಾರ್ಕ 12:32, 33).

ಫರಿಸಾಯರಲ್ಲಿ ಇಲ್ಲದಂತ ತೆರೆದ ಮನಸ್ಸನ್ನೂ, ಸ್ವಭಾವವನ್ನು ಈ ಬೋಧಕನು ಹೊಂದಿದ್ದನು. ಯೇಸು ಇವನಿಗೆ, "ನೀನು ದೇವರ ರಾಜ್ಯಕ್ಕೆ ದೂರವಾದವನಲ್ಲ" ಎಂದು ಹೇಳಿದನು (ಮಾರ್ಕ 12:34ಎ). ಕ್ರಿಸ್ತನು ತನ್ನ ಬೋಧನೆಯನ್ನು ಮುಂದುವರೆಸಿದಾಗ, ಈ ಬೋಧಕನು ತನ್ನ ಮನಸ್ಸನ್ನು ಇನ್ನೂ ತೆರೆದಿಟ್ಟುಕೊಂಡಿದ್ದನೇ? ಪಂಚಾಶತ್ತಮ ದಿನದಂದು ದೂರವಿಲ್ಲದ ಸ್ಥಳದಿಂದ, ದೇವರ ರಾಜ್ಯದೊಳಗೆ ಸಭೆ ಸೇರಿದನೋ (ಅಪೊಸ್ತಲರ ಕೃತ್ಯಗಳು 2:38, 41, 47)? ನಾವು ಅರಿಯದೆ ಹೋದರೂ, ಅವನಿಗೆ ಒಂದು ಅವಕಾಶವಿತ್ತು.

"ದೊಡ್ಡ ಆಜ್ಞೆಯ ಬಗ್ಗೆ ಕೇಳಿದ ಪ್ರಶ್ನೆಯು ಯೇಸುವಿಗೆ ಕೇಳಲ್ಪಟ್ಟ ಕಡೇಯ ಬಹಿರಂಗ ಪ್ರಶ್ನೆಯಾಯಿತು." ಇದರ ಕುರಿತು ಮಾರ್ಕನು, "ಅಂದಿನಿಂದ ಆತನನ್ನು ಪ್ರಶ್ನೆ ಮಾಡುವದಕ್ಕೆ ಯಾರಿಗೂ ಧೈರ್ಯವಿರಲಿಲ್ಲ" ಎಂದು ಬರೆದನು (12:34ಬಿ; ನೋಡಿ ಮತ್ತಾಯ 22:46). ಲೂಕನು "ಆತನನ್ನು ಇನ್ನೇನು ಕೇಳುವದಕ್ಕೂ ಧೈರ್ಯವಿಲ್ಲದೆ ಹೋಯಿತು" (ಲೂಕ 20:40) ಬರೆದನು. ಅವನ ವೈರಿಗಳು ಅವಮಾನದಿಂದ ಬೇಸರಗೊಂಡರು. ಆತನು ನೀಡಿದ ಪ್ರತ್ಯುತ್ತರದಿಂದ ಜನರಲ್ಲಿ ಆತ್ಮ ವಿಶ್ವಾಸ ಹೆಚ್ಚಾಗುತ್ತಾ ಬಂತು (ಮತ್ತಾಯ 22:33; ನೋಡಿ ಮಾರ್ಕ 12:37).

## ಮೆಸ್ಸೀಯನ ಕುರಿತ ವಾಗ್ವಾದ
## (ಮತ್ತಾಯ 22:41-46; ಮಾರ್ಕ 12:35-37; ಲೂಕ 20:41-44)

ಕ್ರಿಸ್ತನ ವೈರಿಗಳು ಪ್ರಶ್ನೆಗಳನ್ನು ಕೇಳಿದರು. ಆದರೆ ಯೇಸು ಬೇಸರಗೊಳ್ಳಲಿಲ್ಲ. ಫರಿಸಾಯರು ಕೂಡಿ ಬಂದಿರುವಾಗ ಯೇಸು ಅವರಿಗೆ - ಬರಬೇಕಾದ ಕ್ರಿಸ್ತನ ಬಗ್ಗೆ ನಿಮಗೆ ಹೇಗೆ ತೋರುತ್ತದೆ? ಅಂದನು (ಮತ್ತಾಯ 22:41),[26] "ಕ್ರಿಸ್ತನ ವಿಷಯವಾಗಿ ನಿಮಗೆ ಹೇಗೆ ತೋರುತ್ತದೆ, ಆತನು ಯಾರ ಮಗನು?" (ಮತ್ತಾಯ 22:42ಎ).

ಫರಿಸಾಯರು "ಕ್ರಿಸ್ತನು" ಎಂಬ ಪದವನ್ನು ಕೇಳಿದ ತಕ್ಷಣ, ನಮ್ಮ ಹಾಗೆ ಯೋಚಿಸದೆ, ಶತಮಾನಗಳ ಹಿಂದೆ ಮೆಸ್ಸೀಯನ ಕುರಿತಾಗಿ ಹೇಳಲಾದ ವಾಗ್ದಾನವನ್ನು ನೆನಪು

ಮಾಡಿಕೊಂಡರು. ಮೊದಲ ನೋಟಕ್ಕೆ ಯೇಸು ಕೇಳಿದ ಪ್ರಶ್ನೆ ಸುಲಭವಾಗಿ ಕಂಡಿತು. ಮೆಸ್ಸೀಯನು ದಾವೀದನ ವಂಶದವನು ಎಂಬ ವಿಚಾರದಲ್ಲಿ ಯೆಹೂದ್ಯ ಪಂಡಿತರಲ್ಲಿ ಸಮ್ಮತವಿತ್ತು (2 ಸಮುವೇಲ 7:12, 13; ಕೀರ್ತನೆ 89:3, 4; 132:11; ಯೆಶಾಯ 9:7; 11:1, 2; ಯೆರೆಮೀಯ 23:5).[27] ಆದ್ದರಿಂದ ಅವರು ಉತ್ತರಿಸಿ; "ದಾವೀದನ ಮಗನು" ಅಂದರು (ಮತ್ತಾಯ 22:42ಬಿ). ಅವರು ಸರಿಯುತ್ತರ ನೀಡಿದರೂ, ಅದು ಪೂರ್ಣ ಉತ್ತರವಾಗ ಅಲ್ಲ. ಮೆಸ್ಸೀಯನು ದಾವೀದನ ಕುಮಾರನು ಎಂದು ವಾಕ್ಯ ಹೇಳುವದಾದರೂ, ಉತ್ತರ ಇನ್ನೂ ಅಧಿಕವಾಗಿದೆ. ಮೆಸ್ಸೀಯನ ಕುರಿತು ಫರಿಸಾಯರು ಹೆಚ್ಚಿನ ತಿಳುವಳಿಕೆಯನ್ನು ಹೊಂದಬೇಕಿತ್ತು.

ಯೇಸು ಎರಡನೇ ಪ್ರಶ್ನೆಯೊಂದಿಗೆ ಮೊದಲಿನ ಪ್ರಶ್ನೆಯನ್ನು ಹಿಂಬಾಲಿಸಿದನು: "ನಾನು ನಿನ್ನನ್ನು ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬ ಮಾತಿನಲ್ಲಿ ದಾವೀದನು ಪವಿತ್ರಾತ್ಮ ಪ್ರೇರಿತನಾಗಿ[28] ಆತನನ್ನು ಒಡೆಯನು ಅನ್ನುವದು ಹೇಗೆ?" (ಮತ್ತಾಯ 22:43, 44). ಇದು ಕೀರ್ತನೆ 110:1 ಹೇಳಿಕೆ. ಯೆಹೂದ್ಯರು ಈ ವಾಕ್ಯವನ್ನು "ಮೆಸ್ಸೀಯನ ಕುರಿತ ವಾಗ್ದಾನ" ಎಂದು ನಂಬಿದ್ದರು.[29] ಮೊದಲನೆಯದಾಗಿ "ಕರ್ತನು" ಅಂದರೆ "ತಂದೆಯಾದ ದೇವರು"[30] "ಕರ್ತನು" ಎಂಬ ಎರಡನೆಯ ಪದವು "ಮೆಸ್ಸೀಯನ" ಕುರಿತ್ತದ್ದಾಗಿದೆ.

ಅಂತಿಮವಾಗಿ ಯೇಸು, "ದಾವೀದನು ಆತನನ್ನು ಮಗನು ಅನ್ನುವದು ಹೇಗೆ?" (ಮತ್ತಾಯ 22:45). ಕ್ರಿಸ್ತನು, "ದಾವೀದನ ಕುಮಾರನು" ಆದಾಗ್ಯೂ ಆತನು ಅದಕ್ಕಿಂತ ಹೆಚ್ಚಿನವನಾಗಿದ್ದನು. ದಾವೀದನ ಒಡೆಯನಾಗಿ ಆತನು ದಾವೀದನ ಸೃಷ್ಟಿ ಕರ್ತನಾಗಿದ್ದನು. ಅನೇಕ ವರ್ಷಗಳ ನಂತರ, ಯೇಸು ಈ ಕುರಿತು ಯೋಹಾನನೊಂದಿಗೆ ಸಾಕ್ಷಿ ನೀಡಿ, "ನಾನು ದಾವೀದ ವಂಶವೆಂಬ *ಮತ್ತು* ಬುಡದಿಂದ ಹುಟ್ಟಿದ ಚಿಗುರು" ಎಂದಿರುವನು (ಪ್ರಕಟನೆ 22:16; ಒತ್ತಿ ಹೇಳಿದ್ದು ನನ್ನದು). ಮೆಸ್ಸೀಯನು *ದಾವೀದನ* ಮಗನೆಂದು (ಅರಿತಂತೆ); ಅತನು *ದೇವರ* ಮಗನು (ದೈವತ್ವ) ಎಂದು ಸಹ ಫರಿಸಾಯರು ಅರಿಯಬೇಕಿತ್ತು.

"ಅದಕ್ಕೆ ಉತ್ತರವಾಗಿ ಯಾರು ಒಂದು ಮಾತಾದರೂ ಆತನಿಗೆ ಹೇಳಲಾರದೆ ಹೋದರು" (ಮತ್ತಾಯ 22:46). ಮೆಸ್ಸೀಯನ ಕುರಿತು ಅವರ ತಿಳುವಳಿಕೆಯು ಅಲ್ಪವಾಗಿತ್ತೋ ಎಂದು ಅವರು ನೀಡಿದ ಉತ್ತರದಿಂದ ತಿಳಿದು ಬಂತು. ಮಾರ್ಕನು, ಬಹಳ ಜನರು ಸಂತೋಷದಿಂದ ಆತನ ಮಾತನ್ನು ಕೇಳಿದರು (ಮಾರ್ಕ 12:37ಬಿ; NIV). ವಾಕ್ಯದಲ್ಲಿ ಪರಿಣಿತರು ಎಂದು ತಿಳಿದಿದ್ದವರು ಯೇಸುವಿನ ಉತ್ತರವನ್ನು ಕೇಳಿ ತಲ್ಲಣಗೊಂಡದ್ದನ್ನು ಅವರು ಗಮನಿಸಿದ್ದರು (ಯೋಹಾನ 7:49).

## ಕಪಟತನವು ಸ್ಥಗಿತಗೊಂಡಿತು
## (ಮತ್ತಾಯ 23:1-39; ಮಾರ್ಕ 12:38-40; ಲೂಕ 20:45-47)

ಯೇಸು ಮತ್ತು ಆತನ ವೈರಿಗಳು ಮಾತಿನ ವಾಗ್ವಾದದಲ್ಲಿ ತೊಡಗಿರುವಾಗ, ಜನರ ಗುಂಪು ಹೆಚ್ಚಾಗುತ್ತಾ ಬಂತು (ನೋಡಿ ಮಾರ್ಕ 12:37ಬಿ). ಯೇಸು ತನ್ನ ವಾದವನ್ನು ಮುಗಿಸುವಾಗ, ಇನ್ನೊಂದು ಕಾರ್ಯವನ್ನು ಪೂರ್ಣ ಮಾಡಬೇಕಿತ್ತು, ಅದು ಹಿತವಲ್ಲದಿದ್ದರೂ, ಅದರ ಅಗತ್ಯವಿತ್ತು.[31] ಫರಿಸಾಯರ ಕುರಿತು ಒಂದು ಮಾತನ್ನು ಹೇಳಬೇಕಾಯಿತು. ಈ ಗುಂಪಿನವರು ಆತನನ್ನು ವರ್ಷಾನುಗಟ್ಟಲೇ ಅವಮಾನಿಸುತ್ತಾ ಬಂದಿದ್ದರು, ಆದರೆ ಯೇಸು ಅವರಲ್ಲಿ ಮುಯ್ಯಿ ತೀರಿಸಿಕೊಳ್ಳುವ ಉದ್ದೇಶವನ್ನು ಹೊಂದಿರಲಿಲ್ಲ. ಅದನ್ನು ಅವರ ಕುರಿತು ಬಲವಾಗಿ ಮಾತನಾಡಿದ ಕೆಲವು ಕಾರಣಗಳನ್ನು ಈ ಕೆಳಗೆ ನೀಡಲಾಗಿದೆ:[32]

(1) ಕೆಟ್ಟದ್ದನ್ನು ಬಯಲು ಪಡಿಸಲೇಬೇಕು. ಕೀರ್ತನೆಗಾರನು: "ಯೆಹೋವನನ್ನು ಪ್ರೀತಿ

ಸುವವರೇ, ಕೆಟ್ಟತನವನ್ನು ಹಗೆ ಮಾಡಿರಿ" (ಕೀರ್ತನೆ 97:10ಎ) ಎಂದು ಬರೆದಿರುವನು (ನೋಡಿ ಆಮೋಸ 5:15). ಈ ಹಿಂದೆ ಯೇಸು ಬೆತ್ತವನ್ನು ಹಿಡಿದು ದೇವಾಲಯವನ್ನು ಶುದ್ಧ ಮಾಡಿದನು, ಈ ವಾಕ್ಯದಿಂದ ಶುದ್ಧಮಾಡುತ್ತಿರುವನು.

(2) ಫರಿಸಾಯರಿಂದ ಪ್ರೇರಿತರಾದವರು, ಫರಿಸಾಯರು ಎಂಥವರು ಎಂದು ಅರಿಯ ಬೇಕಿತ್ತು. ಆದ್ದರಿಂದ ಆತನು ಜನರ ಗುಂಪಿನ ಎದುರಿಗೆ ಮಾತಾಡಿದನು (ಮತ್ತಾಯ 23:1) ಮುಖ್ಯವಾಗಿ ಶಿಷ್ಯರ ಎದುರು (ಮತ್ತಾಯ 23:1; ಲೂಕ 20:45).

(3) ಫರಿಸಾಯರು ಮಾನಸಾಂತರ ಪಡಬೇಕಿತ್ತು. ಆತನು ಫರಿಸಾಯರೊಂದಿಗೆ ಮಾತಾಡಿದನು (ಮತ್ತಾಯ 23:13), ಅವರಲ್ಲಿ ಕೆಲವರಾದರೂ ತಮ್ಮ ಕುರಿತು ಆಲೋಚಿಸ ಬೇಕಿತ್ತು.[33] ವಾಕ್ಯದ ಪ್ರಕಾರವಾಗಿ, "ಜ್ಞಾನವಂತನನ್ನು ಗದರಿಸಿದರೆ, ನಿನ್ನನ್ನು ಪ್ರೀತಿ ಸುವನು" (ಜ್ಞಾನೋಕ್ತಿ 9:8ಬಿ). ಈ ಹಿಂದೆ ಯೇಸು, "ಪರಲೋಕಕ್ಕೆ ದೂರವಾಗದ ಒಬ್ಬ ಫರಿಸಾಯನನ್ನು ಕಂಡುಕೊಂಡಿದ್ದನು" (ಮಾರ್ಕ 12:34); ಪ್ರಾಯಶಃ ಅಲ್ಲಿ ಯಥಾರ್ಥ ಹೃದಯಗಳೂ ಇದ್ದಿರಬಹುದು.

ಮತ್ತಾಯ 23ರ ಶಾಪಗಳನ್ನು ಆತನು ಕೋಪದೃಷ್ಟಿಯಿಂದ, ಬೆರಳುಗಳನ್ನು ಆಡಿಸುತ್ತಾ ಹೇಳಿರಬಹುದು ಎಂಬುದು ಕೆಲವರ ಅಭಿಪ್ರಾಯವಾಗಿದ್ದರೆ, ಅಂತ್ಯದಲ್ಲಿ ಆತನು ಆಡಿದ ಮಾತುಗಳನ್ನು ಗಮನಿಸಿದ್ದೀರಾ? "ಆತನು ಯೆರೂಸಲೇಮೆ, ಯೆರೂಸಲೇಮೆ ..." (ವಚನಗಳು 37-39) ಎಂದು ಹೇಳಿದನು. ಒಬ್ಬ ಬರಹಗಾರನು ಮತ್ತಾಯ 23ರನ್ನು ಕುರಿತು ...

> ... ಆ ಉದ್ವೇಗದಲ್ಲಿರುವ, ಅನುಕಂಪದ ಮೊರೆಯನ್ನು ಗಮನಿಸದೆ ಹೋದರೆ, ಅದರ ಉದ್ದೇಶವನ್ನು ನಾವುಗಳು ಅರಿಯಲಾರೆವು. ತನ್ನ ವೈರಿಗಳಲ್ಲಿ ಆತನು ಮಾಡಿದ ಕಡೇಯ ಬಿನ್ನಹ ಇದರಿಂದ ಅವರು ತಮ್ಮ ಕಠಿಣ ಹೃದಯಗಳಲ್ಲಿ ಮಾನಸಾಂತರಪಟ್ಟು, ನಿರೀಕ್ಷೆ ಹೊಂದುವ ಸಾಧ್ಯತೆ ಇದೆ.[34]

ನಂತರದಲ್ಲಿ, ಮತ್ತಾಯ 23ನ್ನು ಧ್ಯಾನಿಸುವ ಆದರೆ ಈಗ ಆ ಅಧ್ಯಾಯದಲ್ಲಿರುವ ಫರಿಸಾಯರ *ಕಪಟತನದ* ಬಗ್ಗೆ ನೋಡೋಣ. 23:13-15, 23, 25, 27-29ನ್ನು ಗಮನಿಸೋಣ.

ಕರ್ತನ ದೃಷ್ಟಿಯಲ್ಲಿ, ಕೆಲವು ಪಾಪಗಳು ಕಪಟತನಕ್ಕಿಂತಲೂ ದೊಡ್ಡದಾಗಿವೆ. *hupokrites* ಎಂಬ ಗ್ರೀಕ್ ಪದದ ಅರ್ಥ *"ಕಪಟತನ"*[35] ಇದನ್ನು ಒಬ್ಬ "ನಟನಿಗೆ" ಹೇಳ ಲಾಗಿದೆ. "ಅವನಲ್ಲಿದ್ದದನ್ನು ನಟಿಸುವದು" "ನಟನೆ" ಎಂಬ ಪದವನ್ನು ಗಮನಿಸಿ. ಕೆಲವು ಸಂದರ್ಭಗಳಲ್ಲಿ ನಾವುಗಳು ಹೇಳಿದಂತೆ ಇರುವದಿಲ್ಲ - ಕೆಲವು ಸಂದರ್ಭದಲ್ಲಿ ಇರಬೇಕಾದ ಪರಿಸ್ಥಿತಿಯು ಉಂಟಾಗುವಾಗ, "ಅದು ಕಪಟತನ"ವಲ್ಲ. ಒಬ್ಬನು ತನ್ನ ಜ್ಞಾನದ ಪ್ರಕಾರ ಜೀವಿಸಲು ಸಾಧ್ಯವಾಗದಿದ್ದರೆ, ಅದು ಕಪಟವಲ್ಲ. ನಮ್ಮಲ್ಲಿ ಅನೇಕರು ಈ ವಿಧವಾಗಿ ಇದ್ದೇವೆ. ಕಪಟತನದಿಂದ ತುಂಬಿರುವ ಹೃದಯವು, ಕಪಟ ಜೀವನಕ್ಕೆ ನಡೆಸುತ್ತದೆ (ರೋಮಾಪುರ 3:23).

ಈ ವಿಧವಾದ ಪರಿಸ್ಥಿತಿಯಲ್ಲಿ, ಒಬ್ಬನನ್ನು ಕಪಟಿ ಎಂದು ಹೇಗೆ ಗ್ರಹಿಸಬಹುದು. ನಮ್ಮಲ್ಲಿರುವ ಬಲಹೀನತೆಯೇ, ಅವನಲ್ಲೂ ಇರುವದರಿಂದ ಹೇಗೆ ಅವನನ್ನು ಕಪಟಿ ಎಂದು ಗುರುತಿಸಬಹುದು? ಗ್ರಹಿಸಲು ಸಾಧ್ಯವಿಲ್ಲ. ಆದರೆ ಕ್ರಿಸ್ತನು ಆಂತರ್ಯವನ್ನು ಗ್ರಹಿಸಲು ಶಕ್ತನಾಗಿರುವದರಿಂದ (ಯೋಹಾನ 2:25), ಕಪಟಿಗಳನ್ನು ಕಂಡು ಹಿಡಿಯುವ ಸಾಮರ್ಥ್ಯವುಳ್ಳವನಾಗಿದ್ದಾನೆ. ಆದ್ದರಿಂದ ನಾವುಗಳು ಯಾರನ್ನಾದರೂ "ಕಪಟಿ" ಎಂದು ಕರೆಯುವ ನಿರ್ಣಯ ಮಾಡದೆ ಇರೋಣ. "ನಾನು ನನ್ನ ಆತ್ಮವನ್ನು, ನೀನು ನಿನ್ನ ಆತ್ಮವನ್ನು ಮಾತ್ರ ತಿಳಿಯಲು ಸಾಧ್ಯವಿದೆ" (1 ಕೊರಿಂಥ 2:11). ಆದ್ದರಿಂದ ಫರಿಸಾಯರ ಕಪಟತನದ ಬಗ್ಗೆ ಅಧ್ಯಯನ ಮಾಡಿದ್ದಾಗ್ಯೂ, ಅದನ್ನು ಬೇರೆಯವರಿಗೆ ಬಳಸದೆ ಇರೋಣ. ಆದರೆ, ನಮ್ಮ

ಜೀವಿತಗಳಲ್ಲಿ, ಈ ವಿಧವಾದ ಕಪಟತನವು ಇದೆಯೋ ಎಂದು ಪರಿಶೀಲಿಸಿಕೊಳ್ಳೋಣ.

ಯೇಸು ಫರಿಸಾಯರ ಕಪಟತನವನ್ನು ಖಂಡಿಸಿ, "ಅವರು ಎರಡರಷ್ಟು ಖಂಡನೆ ಹೊಂದುವರು" ಅಂದನು (ಮತ್ತಾಯ 23:14; ಮಾರ್ಕ 12:40). ಅವರನ್ನು "ನರಕ ಪಾತ್ರರು" (ಮಾತ್ತಾಯ 23:15) ಎಂದು ಕರೆದನು. ಅಂದಿನ ತನ್ನ ಮಾತುಗಳ ಅಂತ್ಯದಲ್ಲಿ, "ಹಾವುಗಳೇ, ಸರ್ಪಜಾತಿಯವರೇ, ನರಕದಂಡನೆಗೆ ಹೇಗೆ ತಪ್ಪಿಸಿ ಕೊಳ್ಳುವಿರಿ?" ಅಂದನು (ಮತ್ತಾಯ 23:33).[36] ಫರಿಸಾಯರ ಖಂಡನೆ ಅತಿಯಾಯಿತು ಎಂದು ಶಿಷ್ಯರು ತಿಳಿದಿರಲೂ ಬಹುದು (ಮತ್ತಾಯ 15:12).

ಕ್ರಿಸ್ತನ ಈ ಕಠಿಣವಾದ ಮಾತುಗಳು, ಅವರನ್ನು ಸರಿಪಡಿಸುವ ಸಲುವಾಗಿ ಮಾತ್ರ ಬಳಸಲಾಗಿದೆ ಎಂದು ನಾನು ಪುನಃ ಹೇಳುತ್ತೇನೆ. ಯೇಸುವಿನ ಅಂತಿಮ ಪ್ರಲಾಪದಲ್ಲಿ (ಮತ್ತಾಯ 23:37-39). ಆತನು ಕರುಣೆ ತೋರುತ್ತಿದ್ದಾನೆ ಎಂಬ ಸೂಚನೆಯನ್ನು ಕಾಣುತ್ತೇವೆ.[37]

ಅದು ಕ್ರಿಸ್ತನ ಕಡೇಯ ಸಂಭಾಷಣೆಯಾಗಿರಬಹುದು.[38] ಅದು ನಿಜವಾಗಿ ಕಡೇಯ ಮಾತೇ. ಅದು ಯೋಗ್ಯವಾದದ್ದೇ; ಅದಾಗ್ಯೂ ದುಃಖಕರವಾದದ್ದೇ. ಇನ್ನು ಮುಂದೆ ಅವರು ಕರುಣೆಯನ್ನು ಬಯಸುವ ಸಾಧ್ಯತೆಯಿರಲಿಲ್ಲ.[39] ಈಗ ಆತನ ವೈರಿಗಳು ಹೋರಾಟದ ಸ್ಥಳವನ್ನು ಬಿಟ್ಟುಹೋದರು, ಅವರು "ರಕ್ತ ಸುರಿಸಿಕೊಂಡವರಾಗಿ" ಏಟು ತಿಂದವರಾಗಿ ಹೊರಟು ಹೋಗಿ ಆತನನ್ನು ಕೊಲ್ಲಲು ಸಂಚು ಮಾಡಿದರು.

## ಮುಕ್ತಾಯ

ಕ್ರಿಸ್ತನ ಬಹಿರಂಗವಾದ ಸೇವೆ ಅಂತ್ಯವಾಯಿತು. ಆದರೆ ದಿನವು ಇನ್ನು ಅಂತ್ಯವಾಗಿರಲಿಲ್ಲ. ಮಂಗಳವಾರದ ಇನ್ನುಳಿದ ಘಟನೆಗಳ ಬಗ್ಗೆ ಮುಂದಿನ ಪಾಠದಲ್ಲಿ ನೋಡೋಣ. ಯೇಸು ಆ ದಿನದ ಸಕಲ ಘಟನೆಗಳನ್ನು ಹಾದು ಹೋದನು. ಆತನು ಗೆದ್ದವನೂ, ಜಯಶಾಲಿಯೂ ಆಗಿದ್ದನು.

ಕರ್ತನಂತೆ ಉತ್ತರವನ್ನು ಹೇಳಬೇಕೆಂಬ ಸಾಮರ್ಥ್ಯವನ್ನು ನಾನು ಸಹ ಹೊಂದಲು ಬಯಸುತ್ತೇನೆ.[40] ಏನನ್ನು, ಹೇಗೆ ಹೇಳಬೇಕು, ಮೃದುವಾಗಿ ಹಾಗೂ ಕಠಿಣವಾಗಿ ಉತ್ತರಿಸಲು ತಿಳಿಯಬೇಕು. ನಾನು ಅಸಾಮರ್ಥ್ಯವನ್ನು ಎಂದಿಗೂ ಪಡೆಯಲಾರೆ. ಆದರೆ ನಾನು ಅಂತ್ಯದವರೆಗೆ ನಂಬಿಗಸ್ತನಾಗಿದ್ದರೆ, ಅಂತಿಮವಾಗಿ ಜಯಹೊಂದುತ್ತೇನೆ (ಪ್ರಕಟನೆ 15:2)!

---

## ಮಾಹಿತಿ

ಯೇಸುವಿನ ಕಾಲದಲ್ಲಿದ್ದ ಸದ್ದುಕಾಯರು ಪುನರುತ್ಥಾನವನ್ನು ನಂಬದೆ ಇದ್ದ ಹಾಗೆ, ಅನೇಕರು ಅದನ್ನು ನಿರಾಕರಿಸುತ್ತಿದ್ದಾರೆ. ಪುನರುತ್ಥಾನದ ಕುರಿತು ಯೇಸು ಸದ್ದುಕಾಯರೊಂದಿಗೆ ಮಾಡಿದ ಚರ್ಚೆಯ ಮುನ್ನುಡಿಯನ್ನು ನೀವುಗಳೂ ಬಳಸಬಹುದು.

ದೊಡ್ಡ ಹಾಗೂ ಎರಡನೆಯ ಅಪ್ಪಣೆಯ ಬಗ್ಗೆ ಬೋಧಿಸಬಹದು. "ಕರ್ತನನ್ನು ಪೂರ್ಣವಾಗಿ ಪ್ರೀತಿಸುವವನು ದೇವರ ದೂರವಾದವನಲ್ಲ" (ಮಾರ್ಕ 12:34). ಎಂಬ ಕ್ರಿಸ್ತನ ಮಾತುಗಳಿಂದ ಮಾತಡಬಹುದು ಕ್ರಿಸ್ತನ ದೈವತ್ವದ ಬಗ್ಗೆಯೂ ಮಾತಾಡಬಹುದು: ಆತನು ಯಾರ ಮಗನು? ಮೆಕ್‌ಗಾರ್ವೆಯವರು ಈ ಕುರಿತು ಈ ಕೆಳಗಿನಂತೆ ಬರೆದಿದ್ದಾರೆ:

> ಕೀರ್ತನೆ [110] ಮೆಸ್ಸೀಯನು "ದಾವೀದನ ಒಡೆಯನು" ಎಂದು ಹೇಳುತ್ತದೆ ಇತರೆ ವಾಕ್ಯಗಳು ಆತನನ್ನು "ದಾವೀದನ ಮಗನು" ಎನ್ನುತ್ತಾವೆ. ಕ್ರಿಸ್ತನು ಜಯಹೊಂದ್ದಿದರೂ, ಬಾಧೆಪಟ್ಟನು ದೈವತ್ವಹೊಂದಿದ್ದರು. ಮಾನವನಾದನು. ಮರಣಹೊಂದ್ದಿದರೂ,

> ಬದುಕುವವನಾದನು. ತೀರ್ಪು ನೀಡಿದ್ದರೂ, ತೀರ್ಪು ಹೊಂದಿದನು. ಆದರೆ ವಾಕ್ಯದಲ್ಲಿ ನೀಡಲಾಗಿರುವ ಈ ಎಲ್ಲಾ ಸಂಗತಿಗಳಲ್ಲಿ ಯೆಹೂದ್ಯರು ಒಂದು ಭಾಗವನ್ನು ಮಾತ್ರ ತಿಳಿದುಕೊಂಡರು.[41]

ಈ ದಿನಗಳಲ್ಲಿ ಸಹ ಕೆಲವರು ಯೇಸುವಿನ ಕುರಿತಾಗಿ ಒಂದು ಭಾಗವನ್ನು ಮಾತ್ರ ತಿಳಿದಿದ್ದಾರೆ.

ಮತ್ತಾಯ 23 ಮತ್ತು ಮಾರ್ಕ ಮತ್ತು ಲೂಕನಲ್ಲಿರುವ ಇತರೆ ಚಿಕ್ಕ ಕಥೆಗಳು ಪ್ರಸಂಗಕ್ಕೆ ಯೋಗ್ಯವಾಗಿವೆ. ಮತ್ತಾಯ 23ರ ಪ್ರಸಂಗದ ಮೇಲಿನ ಟಿಪ್ಪಣಿಗಳು "ಫರಿಸಾಯರ ಹುಳಿ"ಯ ಎಂಬ ಪಾಠದಲ್ಲಿ ಕಾಣಬಹುದು. ಮತ್ತಾಯ 23ರಲ್ಲಿ ಒಂದೊಂದು ವಾಕ್ಯಭಾಗವು ಪ್ರಸಂಗಕ್ಕೆ ಚಿಗಿತ ಫಲಕೆಯ ಮೇಲೆ ಬಳಸಬಹುದಾದ್ದಗಿವೆ. ವಚನ 3ರಲ್ಲಿ ವಿಧೇಯತೆಯ ಬಗ್ಗೆ, ಒಂದು ಸಾಮಾನ್ಯ ಪ್ರಸಂಗವನ್ನು ಪರಿಚಯಿಸುತ್ತಿದೆ: "ಅವರು ಹೇಳುತ್ತಾರೆ ..., ಮಾಡುವದಿಲ್ಲ." ವಚನ 8ರ ಮೇಲಿನ ಪ್ರಸಂಗದ ಬಗ್ಗೆ ಏನು: "ನೀವೆಲ್ಲರೂ ಸಹೋದರರು"? ವಚನ 15ನ್ನು "ವೈಯಕ್ತಿಕ ಕಾರ್ಯಗಳ ಅಪಾಯ"ಗಳನ್ನು ಬೋಧಿಸಲು ಬಳಸಬಹುದು. ನನ್ನ ಪ್ರಸಂಗದ ಮೊದಲನೆಯ ಪುಸ್ತಕದಲ್ಲಿ ಒಂದು ಪ್ರಸಂಗವು ವಚನ 24ರ ಮೇಲೆ ಇದೆ: "ಒಂಟೆಗಳಿಗಾಗಿ ನೋಡಿ!"[42] ಇತರ ವಿಷಯಗಳು "ಫರಿಸಾಯರ ಹುಳಿಯ ಬಗ್ಗೆ ಎಚ್ಚರಿಕೆ" ಎಂಬ ಪ್ರಸಂಗದಲ್ಲಿ ಕಾಣಬಹುದು.

---

ಟಿಪ್ಪಣಿಗಳು

[1]ಹಿಂದಿನ ಪಾಠದಲ್ಲಿ ನೋಡಿರುವಂತೆ ಈ ಘಟನೆಗಳನ್ನು ಹಲವರು ಮಂಗಳವಾರದ ಬದಲು, ಬುಧವಾರ ಮುಂಜಾನೆ ಯೇಸು ತೀರ್ಪಿನ ಬಗ್ಗೆ ಮಾತನಾಡಿದ ನಂತರ ಇಡುತ್ತಾರೆ. [2]ಅನೇಕ ಬರಹಗಾರರು ಇದು ಯೇಸುವಿನ ಅಂತಿಮ ಸಂಭಾಷಣೆ ಅನ್ನುತ್ತಾರೆ. ಆದರೆ ಶಿಲುಬೆಯ ಮೇಲೆ ಯೇಸು ಮಾತಾಡಿದನು (ಯೋಹಾನ 12:20-36). [3]ಸದ್ದುಕಾಯರು ಪುನರುತ್ಥಾನವನ್ನು ನಂಬಲಿಲ್ಲ. ಗ್ರೀಕರ ತತ್ವವನ್ನು ನಂಬಿದ್ದರು. ಅವರು ಅಧಿಕಾರದಲ್ಲಿರುವರೊಂದಿಗೆ ಇಷ್ಟಪಟ್ಟದ್ದರಿಂದ ಅವರು ಒಂದು ಬಲವಾದ ಶಕ್ತಿಯಾದರು. [4]ಸದ್ದುಕಾಯರ ಮತ್ತು ಫರಿಸಾಯರ ನಡುವಿನ ಹೋರಾಟದ ಬಗ್ಗೆ ಅಪೊಸ್ತಲರ ಕೃತ್ಯಗಳು 23:6-9ನ್ನು ನೋಡಿರಿ. [5]ಮೋಶೆಯು ಬರೆದಿದ್ದಾರೆ ಆದರೆ ಆಚಾರವು ತುಂಬಾ ಪುರಾತನವಾದದ್ದು (ನೋಡಿ ಆದಿಕಾಂಡ 38:8). ರೂತಳ ಚರಿತ್ರೆಯನ್ನು ಮೋಶೆಯ ಲೆವಿರೇಟ್ ನಿಯಮವು ತಿಳಿಸುತ್ತದೆ (ರೂತ 3:1-4:12). [6]ಇದನ್ನು ಫ್ರಾಂಕ್ಲಿನ್ ಕಾರ್ಟರ್‌ರವರು "ಬುದ್ಧಿವಂತಿಕೆಯಿಂದ ಉಪಯೋಗಿಸಿದ ನಿಯಮ" ಎಂದರು (John Franklin Carter, *A Layman's Harmony of the Gospels* [Nashville: Broadman Press, 1961], 260). [7]ವಾಕ್ಯ ಹಾಗೂ ದೇವರ ಬಲ ಎಂಬ ಎರಡು ಅಂಶಗಳನ್ನು ನಿರ್ಲಕ್ಷಿಸಬಾರದು! [8]ದಾಂಪತ್ಯವು ಮರಣದಿಂದ ಮುಂದೆ ಸಾಗುತ್ತದೆ ಎಂಬುದನ್ನು ಮಾರ್ಮನ್ನರು ಅರಿಯಲಿಲ್ಲ. [9]ಈ ಜೀವನದಲ್ಲಿ ಕುಟುಂಬ ಸಭ್ಯರೊಂದಿಗಿರುವ ಪ್ರತ್ಯೇಕವಾದ ಪ್ರೀತಿಯನಲ್ಲವೆಂದು ಇದರ ಅರ್ಥವಲ್ಲ. ಅವರ ಸಂಬಂಧ ಭಾಂದವ್ಯವು ವ್ಯತ್ಯಾಸವಾದದ್ದೆಂದು ಇದು ತಿಳಿಸುತ್ತದೆ: ಈ ಬಾಂದವ್ಯವು ಶಾರೀರಿಕವಾದದ್ದಲ್ಲ ಆತ್ಮಿಕವಾದ್ದಲ್ಲ ಆತ್ಮಿಯವಾದದ್ದು. [10]J. W. McGarvey and Philip Y. Pendleton, *The Fourfold Gospel or a Harmony of the Four Gospels* (Cincinnati: Standard Publishing Foundation, n.d.), 602.

[11]ಜನರೊಂದಿಗೆ ನಾವು ಅಧ್ಯಾಯನ ಮಾಡುವಾಗ ಅಧಿಕಾರವನ್ನು ಒಪ್ಪಿಕೊಳ್ಳುವ ಬಗ್ಗೆ ಬೋಧಿಸಬೇಕು. [12]Ibid. [13]"*ನಾನು ಕುರುಡನಾಗಿದ್ದೇನೆ, ಈಗ ಕಣ್ಣು ಕಾಣುತ್ತದೆ*" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 4ನೇ* ಪುಸ್ತಕದಲ್ಲಿ ನೋಡಿ. [14]ಅಕ್ಷರಾರ್ಥವಾಗಿ ದೈವ ಪ್ರೇರೇಪಿತವನ್ನು ನಂಬದೇ ಇರುವ ಹಲವರು ನಾವು ಯೇಸು ಸಿದ್ಧಾಂಥಗಳನ್ನು ಬೋಧಿಸುವಾಗ ಪ್ರತ್ಯೇಕಿಸಿದ ಪದಗಳ ಮೇಲೆ ಕೇಂದ್ರಿಕೃತವಾಗಬಾರದೆಂದು ಹೇಳುತ್ತಾರೆ. ಯೇಸು ಕೆಲವು ಅಂಶಗಳನ್ನು ತೋರಿಸಲು ಪದ ಬಳಕೆ ಮಾಡಿದನು. [15]ಮಾರ್ಕನು ಅವನನ್ನು "ಶಾಸ್ತ್ರಿ" ಎಂದು ಕರೆದನು (ಮಾರ್ಕ 12:28). ಅವರು ಧಾರ್ಮಿಕ ನಿಯಮಗಳಲ್ಲಿ ಪರಿಣಿತರಾಗಿದ್ದರು, ನಾಹರೀತ ನಿಯಮಗಳಲ್ಲ. [16]ಇವರ ಮೇಲೆ ಇರುವ

ಚರ್ಚೆಗೆ ಈ ಪುಸ್ತಕದಲ್ಲಿರುವ ಹಿಂದಿನ ಪಾಠ ನೋಡಿರಿ. [17]ಈ ವಿವರಗಳನ್ನು ಮತ್ತಾಯ 22:34, 41 ರೊಂದಿಗೆ ಹೋಲಿಸಿ. ಯೇಸು ಮತ್ತು ಶಾಸ್ತ್ರಿಯ ಮಧ್ಯ ನಡೆದ ಚರ್ಚೆಯ ಸಮಯದಲ್ಲಿ ಇವರು "ಒಟ್ಟುಗೂಡಿದರು." ಮತ್ತಾಯ 22:41ರ ಬಗ್ಗೆ ಬೈಬಲ್ ವಾಕ್ಯಭಾಗವು ಹೀಗಿದೆ, "ಅನಂತರ ಫರಿಸಾಯರು ಸುತ್ತಮುತ್ತಲಿರುವಾಗ ಆತನು ಅವರನ್ನು ಒಂದು ಪ್ರಶ್ನೆ ಕೇಳಿದನು ..." [18]H. I. Hester, *The Heart of the New Testament* (Liberty, Mo.: Quality Press, 1963), 193. [19]ಈ ವಿಮರ್ಷೆಯ ಚರ್ಚೆಗೆ "ಒಬ್ಬ ಕುರುಬನ ಚಿಂತೆ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 4ನೇ* ಪುಸ್ತಕದಲ್ಲಿ ನೋಡಿ. [20]ಯೇಸು ಈ ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುವದರಿಂದ ಮತ್ತೇ ಯಾಕೆ ಕೇಳಿದರು ಎಂಬುದರ ಬಗ್ಗೆ ಒಬ್ಬರು ಆಶ್ಚರ್ಯಪಡುತ್ತಾರೆ. ಅದು ವಿವಾಸ್ಪಾದವಾದ್ದರಿಂದ ಮತ್ತು ಯೇಸು ಕೊಟ್ಟ ಉತ್ತರವು ಗುಂಪಿನಲ್ಲಿದ್ದ ಹಲವರನ್ನು ಬೇರ್ಪಡಿಸುವಾದಾಗಿದೆ ಎಂದು ಫರಿಸಾಯರು ನಿರೀಕ್ಷಿಸಿದ್ದರಿಂದ ಪ್ರಶ್ನೆ ಮತ್ತೇ ಕೇಳಲ್ಪಟ್ಟಿತು. ಬಹುಶಃ ಯೆರೂಸಲೇಮಿನ ಹೊಸ ಭಾಗದಲ್ಲಿ ನಡೆದ ಘಟನೆಯನ್ನು ಪ್ರಶ್ನಿಸಿದವರು ಅರಿತಿರಲಿಲ್ಲ.

[21]ಮಾರ್ಕ 12:29, 30ರ ಮೇಲಿನ ಸಂಪೂರ್ಣ ವಿವರವಾದ ಚರ್ಚೆಗೆ "ಪೂರ್ಣ ಹೃದಯದಿಂದ ದೇವರನ್ನು ಪ್ರೀತಿಸುವದು" ಎಂಬ ಪಾಠ ನೋಡಿರಿ. [22]"ಎರಡನೆ" ಆಜ್ಞೆ ಏನು ಎಂದು ಯೇಸು ಕೇಳಲಿಲ್ಲ. ನಮ್ಮ ದೇಶದ ಭಾಗದಲ್ಲಿ ಅವರು "ಉಚಿತವಾಗಿ ಅದನ್ನು ಎಸೆದರು" ಎಂದು ಹೇಳಿದ ಮಾತುಂಟು." ಅದನ್ನು ಪ್ರಕಟನೆಯಾಗಿ ನೀಡಿರಬಹುದು. [23]"ಎರಡನೇ ಆಜ್ಞೆಯ" ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಬರಹಗಾರರು ಇದೇ ವಿಧದ ಚರ್ಚೆ ಹೊಂದಿದ್ದರು (ನೋಡಿ ರೋಮಾಪುರ 13:8-10; ಗಲಾತ್ಯ 5:14; ಯಾಕೋಬ 2:8). [24]ಆತನ ನಿಜವಾದ ಆಸಕ್ತಿಯನ್ನು ಫರಿಸಾಯರು ಅರಿಯಲಿಲ್ಲ (ಮತ್ತಾಯ 22:34, 35). ಧರ್ಮೋಪದೇಶಕನು ಫರಿಸಾಯರ ಪ್ರತಿನಿ ಧರ್ಮಶಾಸ್ತ್ರಕನು ಕೇಳಿದ ಪ್ರಶ್ನೆಯು ಯೋಗ್ಯವಾದ್ದೆಂದು ಮಾರ್ಕನು ಸೂಚಿಸಿದನು (ಮಾರ್ಕ 12:28). ಎರಡು ವಿಷಯಗಳು ವ್ಯಾಖ್ಯಾನವಾಗಿವೆ, ವಿರುದ್ಧವಾಗಿಲ್ಲ: ಹೀಗೆ ಮುಂದೋಗ ಬೆಕೆಂಬುದರ ಬಗ್ಗೆ ಫರಿಸಾಯರು ಗಾಬರಿಗೊಂಡಿರುವಾಗ, ಅವರಲ್ಲಿ ಒಬ್ಬನು ಪ್ರಶ್ನೆ ಕೇಳಲು ಮುಂದೆ ಬಂದನು, ಆ ಪ್ರಶ್ನೆಗೆ ಉತ್ತರವನ್ನು ಕೇಳಲು ಆತನು ಬಯಸಿದ್ದನು. [25]ಜೊತೆ ಫರಿಸಾಯರು, ಈ ಉತ್ತರದಿಂದ ತಲ್ಲಣಗೊಂಡಿರಬಹುದು. [26]ಮತ್ತಾಯನ ಪ್ರಕಾರ ಫರಿಸಾಯರಿಗೆ ಯೇಸು ಈ ಪ್ರಶ್ನೆಯನ್ನು ಕೇಳಿದನು. ಕೇಳುತ್ತಿರುವ ಎಲ್ಲರಗೆ ಯೇಸು ಈ ಪ್ರಶ್ನೆಯನ್ನು ಕೇಳಿದನೆಂದು ಮಾರ್ಕ 12:35 ತಿಳಿಸುತ್ತದೆ. ಲೂಕ 20:40, 41 ಯೇಸುವನ್ನು ಪ್ರಶ್ನಿಸುತ್ತಿರುವವರಿಗೆ ಈ ಪ್ರಶ್ನಿಯನ್ನು ಕೇಳಿದನೆಂದು ತಿಳಿಸುತ್ತದೆ. ಈ ಎಲ್ಲಾ ದಾಖಲೆಗಳು ಖಚಿತವಾಗಿವೆ: ಕೇಳುವವರೆಲ್ಲರಿಗೆ ಪ್ರಶ್ನಿಸಿದನು. ಆದರೆ ಪ್ರತ್ಯೇಕಿಸಿ ಫರಿಸಾಯರಿಗೆ ಸವಾಲನ್ನು ಎಸೆದರು (ಅವರು ಯೇಸುವನ್ನು ಪ್ರಶ್ನಿಸಿದರು). [27]ಮೆಸ್ಸೀಯನ ಕರ್ತವ್ಯವನ್ನು ಯೇಸು ನೆರವೇರಿಸಿದನು (ಮತ್ತಾಯ 1:1; ರೋಮಾಪುರ 1:3). ಆತನನ್ನು "ದಾವೀದನ ಕುಮಾರನು" ಎಂದು ಸುವಾರ್ತೆಗಳಲ್ಲಿ ಹೇಳಲಾಗಿದೆ (ನೋಡಿ ಮತ್ತಾಯ 12:23; 15:22; 20:30; 21:9, 15). [28]ಕೀರ್ತನೆ 110ನ್ನು ದಾವೀದನು ಬರೆದಿರುವನು ಎಂದು ಯೇಸು ದೃಢೀಕರಿಸಿದನು ಮತ್ತು ಆತನು ದೈವ ಪ್ರೇರಿತನಾಗಿ ಬರೆದನು. [29]Carter, 263. ಈ ವಾಕ್ಯಭಾಗವನ್ನು ಒಮ್ಮೆ ಪೇತ್ರನು ಉಲ್ಲೇಖಿಸಿದನು (ಅಪೊಸ್ತಲರ ಕೃತ್ಯಗಳು 2:34, 35) ಮತ್ತು ಇಬ್ರಿಯ ಪುಸ್ತಕವನ್ನು ಬರೆದ ಬರಹಗಾರರು ಅನೇಕ ಸಲ ಉಲ್ಲೇಖಿಸಿದರು (ಇಬ್ರಿಯ 1:13; 5:6; 7:17, 21). [30]ಕೀರ್ತನೆ 110:1ರಲ್ಲಿ "ಕರ್ತನು" ಎಂಬುದನ್ನು ದಪ್ಪ ಅಕ್ಷರದಲ್ಲಿ ("**ಕರ್ತನು**") ಬರೆಯಲಾಗಿದೆ. ಆತನ ನಾಮವನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು. "ಕರ್ತನು" ಎಂಬ ಪದವು ದೇವರ ಪವಿತ್ರಾಮದ ನಾಮವನ್ನು ಸೂಚಿಸುತ್ತಾರೆ. ಇಬ್ರಿಯರ ಮೂಲ ವಾಕ್ಯಗಳಲ್ಲಿ (ಸ್ವರಾಕ್ಷರಗಳು ಇರುವುದಿಲ್ಲ), ಈ ಪವಿತ್ರಾವಾದ ನಾಮವು ವ್ಯಂಜಾಕ್ಷರಗಳಿಂದ ಸೂಚಿಸಲಾಗಿದೆ (ಇದನ್ನು "The Sacred Tetragrammaton," ಅಥವಾ ಪವಿತ್ರವಾದ ನಾಲ್ಕು ಅಕ್ಷರಗಳು): YHWH (ಇದನ್ನು JHVH ಎಂದು ಉಚ್ಚರಿಸಬಹುದು). ದೇವರ ನಾಮವನ್ನು ವ್ಯರ್ಥವಾಗಿ ಉಚ್ಚರಿಸಲು ಭಯಪಡುತ್ತಿದ್ದರು, ಯೆಹೂದ್ಯರು ಈ ನಾಮವನ್ನು ಹೇಳುತ್ತಿರಲಿಲ್ಲ. ಹಲವು ಕಾಲದ ನಂತರ ಈ ಉಚ್ಚರಣೆಯು ಬಳಕೆಯಿಲ್ಲದಂತಾಯಿತು. ಸ್ವರಕ್ಷಾರಗಳು ವ್ಯಂಜಾಕ್ಷರಗಳೊಂದಿಗೆ ಸೇರಿದಾಗ ಯಾವ ಸ್ವರಾಕ್ಷರಗಳನ್ನು ಸೇರಿಸಬೇಕೆಂಬುದರ ಬಗ್ಗೆ ಯಾರು ಅರಿತಿರಲಿಲ್ಲ. "Yahweh" ಎಂದು ಅನೇಕರು ಉಚ್ಚರಿಸಬೇಕಾದ ನಾಮವೆಂದು ಯೋಚಿಸಿದರು. ಹಲವು ಭಾಷಾಂತರಕಾರರು ಇಬ್ರಿಯ ಪದದಲ್ಲಿರುವ ಸ್ವರಕ್ಷಾರಗಳನ್ನು "ಕರ್ತನು" ಎಂಬ ಪದಕ್ಕೆ ಸೇರಿಸಿ "ಯೆಹೋವ" ಎಂಬ ನಾಮವನ್ನು ಉಪಯೋಗಿಸಿದರು. NASB ಮತ್ತು ಇತರ ಭಾಷಾಂತರಕಕಾರರು ಈ ಪದವನ್ನು ಹೇಗೆ ಉಚ್ಚರಿಸಬೇಕೋ ಎಂದು ತಿಳಿಯದೆ "**ಕರ್ತನು**" ಎಂಬ ಪದವನ್ನು ದೇವರ "ಪವಿತ್ರನಾಮಕ್ಕೆ" ಬದಲಾಗಿ ಉಪಯೋಗಿಸಿದರು.

[31]ಪ್ರತಿ ಪ್ರಸಂಗಿಯು ಸವಾಲನ್ನು ಹೊಂದಿರುತ್ತಾರೆ (ನೋಡಿ 2 ತಿಮೊಥೆ 4:1-5). [32]ಚರ್ಚೆಯಲ್ಲಿನ

ನಾಲ್ಕನೇ ಕಾರಣದ ಬಗ್ಗೆ "ಫರಿಸಾಯರ ಹುಳಿಯ ಬಗ್ಗೆ ಎಚ್ಚರವಾಗಿರಿ" ಎಂಬ ಪಾಠವನ್ನು ನೋಡಿ. [33]ಒಂದೇ ಸಂದೇಶದಿಂದ ಎಲ್ಲರನ್ನು ಸ್ಪರ್ಷಿಸಲು ಅಸಾಧ್ಯ. ಹಲವರಿಗೆ ನಿರ್ಧಿಷ್ಟವಾದ ಸಂದೇಶ ಬೇಕಾಗಿರುತ್ತದೆ. [34]David Smith, *Our Lord's Earthly Life* (New York: G. H. Doran, 1926), 353; quoted in H. I. Hester, *The Heart of the New Testament* (Liberty, Mo.: Quality Press, 1963), 194. [35]*Hupokrites* ಎಂಬುದು ಒಂದು ಮಿಶ್ರಪದ, "ತೀಪು" (*krites*; "kri-tace" ಎಂದು ಉಚ್ಚರಿಸುವ ಪದ) *hupo* ರೊಂದಿಗೆ ಸೇರಿ "ಕೆಳಗೆ" ಅಥವಾ "ಪಕ್ಕದ" ಎಂಬ ಅರ್ಥಕೊಡುತ್ತದೆ. [36]ಮತ್ತಾಯ 3:7; 12:34; ಲೂಕ 3:7 ಹೋಲಿಸಿ. [37]Carter, 265. [38]ಟಿಪ್ಪಣಿ 2ನ್ನು ನೋಡಿ. [39]B. S. Dean, "An Outline of New Testament History," *Truth for Today* (March 1992): 25. [40]ಯೇಸು ಇದ್ದ ಸ್ಥಿತಿಯಲ್ಲಿ ನಾನು ಹಲವಾರು ಸಾರಿ ಇದ್ದೆನು: ಧಾರ್ಮಿಕ ಅಪನಂಬಿಕರಿಂದ ಸುತ್ತಲ್ಪಟ್ಟೆನು. ಒಬ್ಬನು ನನ್ನ ಮೇಲೆ ಪ್ರಶ್ನೆಯನ್ನು ಎಸೆಯುವನು. ನಾನು ಉತ್ತರಕೊಟ್ಟ ಕ್ಷಣದಲ್ಲಿ ವಿವರಿಸುವದಕ್ಕೆ ಮುಂಚಿತವಾಗಿಯೇ ಮತ್ತೊಂದು ಕಡೆಯ ಮತ್ತೊಂದು ಪ್ರಶ್ನೆ ಬರುತ್ತಿತ್ತು. ಇಂತಹ ಸಂದರ್ಭದಲ್ಲಿ ಸೋಲುವುದೋ ಅಥವಾ ಗೆಲ್ಲುವುದೋ ಎಂಬ ಭಾವನೆಯಿಂದ ಹೊರಬರಲಿಲ್ಲ.

[41]McGarvey and Pendleton, 605. [42]David Roper, *The Day Christ Came (Again) and Other Sermons* (Dallas: Christian Publishing Co., n.d.), 161-74.